# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 661 |
| ಸದಸ್ಯರ ಹೆಸರು | : | ಶ್ರೀ ಅರವಿಂದ ಕುಮಾರ್ ಅರಳಿ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 11-12-2023 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

****

| ಪ್ರಶ್ನೆ | | ಉತ್ತರ |
|---|---|---|
| (ಅ) | ಇಂಧನ ಇಲಾಖೆಗೆ ಒಳಪಡುವ ಬೆಸ್ಕಾಂ, ಕೆ.ಪಿ.ಟಿ.ಸಿ.ಎಲ್. ಕೆ.ಪಿ.ಸಿ.ಎಲ್. ಸಂಸ್ಥೆಗಳಲ್ಲಿ ನೌಕರರ ಅಧಿಕಾರಿಗಳ ಕೊರತೆಯಿದೆಯೇ; ಹಾಗಿದ್ದಲ್ಲಿ, ಕೊರತೆ ಇರುವ ಹುದ್ದೆ, ಸಂಖ್ಯೆ, ವಿಭಾಗ ಕುರಿತಂತೆ ಪ್ರತ್ಯೇಕ ಮಾಹಿತಿ ನೀಡುವುದು; | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆ.ಪಿ.ಟಿ.ಸಿ.ಎಲ್) ಹಾಗೂ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ)ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ.<br><br>ಖಾಲಿ ಇರುವ ಹುದ್ದೆಗಳನ್ನು ಕಾಲಕಾಲಕ್ಕೆ ಪದೋನ್ನತಿ ಹಾಗೂ ನೇರನೇಮಕಾತಿ ಮೂಲಕ ಭರ್ತಿಮಾಡಿಕೊಳ್ಳಲಾಗುತ್ತಿದೆ.<br><br>. ಕರ್ನಾಟಕ ವಿದ್ಯುತ್ ನಿಗಮದಲ್ಲಿನ ಉದ್ಯೋಗಿಗಳ ವಯೋನಿವೃತ್ತಿ, ಸ್ವಯಂ ನಿವೃತ್ತಿ ಹಾಗೂ ರಾಜೀನಾಮೆಯಿಂದ ಕೆಲವೊಂದು ವೃಂದದ ಹುದ್ದೆಗಳು ಖಾಲಿಯಿದ್ದು, ಪ್ರಸ್ತುತ ವೈಟಿಪಿಎಸ್ ಯೋಜನೆಯಡಿ ಪಾಲನೆ ಮತ್ತು ನಿರ್ವಹಣೆ ಕಾರ್ಯಗಳನ್ನು ಮೆ॥ ಪವರ್ ಮೇಕ್ ಹೈದರಾಬಾದ್ [ಖಾಸಗಿ ಸಂಸ್ಥೆಗೆ] ವಹಿಸಲಾಗಿರುವುದರಿಂದ ಇಲ್ಲಿನ ಕಾರ್ಪೊರೇಟ್/ಕಾರ್ಮಿಕ ಉದ್ಯೋಗಿಗಳನ್ನು ನಿಗಮದ ಇತರೆ ಯೋಜನೆಗಳಿಗೆ ರಿ-ಡಿಪ್ಲಾಯ್‌ಮೆಂಟ್ ಮಾಡಿರುವುದರಿಂದ ನಿಗಮದ ಯಾವುದೇ ಕೆಲಸಗಳಿಗೆ ತೊಂದರೆಯಾಗಿರುವುದಿಲ್ಲ. ಮುಂದುವರೆದಂತೆ ನಿಗಮದಲ್ಲಿ ಯಾವುದೇ ಹೊಸ ಯೋಜನೆಗಳು ಪ್ರಗತಿಯಲ್ಲಿ ಇಲ್ಲದೇ ಇರುವುದರಿಂದ ಹಾಗೂ ನಿಗಮದ ಯೋಜನೆಗಳಲ್ಲಿ ನಿರ್ವಹಣೆ ಕಾರ್ಯಗಳು ಮಾತ್ರ ನಡೆಯುತ್ತಿರುವುದರಿಂದ ಪ್ರಸ್ತುತವಿರುವ ಮಾನವ ಸಂಪನ್ಮೂಲದಿಂದಲೇ ಕಾರ್ಯಗಳನ್ನು ಸರಿದೂಗಿಸಿಕೊಳ್ಳಲಾಗುತ್ತಿರುವುದರಿಂದ ನೌಕರರ ಕೊರತೆಯುಂಟಾಗಿರುವುದಿಲ್ಲ. ಆದಾಗ್ಯೂ ಪ್ರಸ್ತುತ ನಿಗಮದಲ್ಲಿ ಕಾರ್ಯಬಲದಂತೆ ಖಾಲಿಯಿರುವ ಹುದ್ದೆಗಳ ವಿವರವು ಈ ಕೆಳಕಂಡಂತಿರುತ್ತದೆ. |

| | | |
|---|---|---|
| 1 | ಎ | 669 |
| 2 | ಬಿ | 1261 |
| 3 | ಸಿ | 2260 |
| 4 | ಡಿ | 270 |
| ಒಟ್ಟು | | 4460 |

ನಿಗಮದ ವೃಂದ ಬಲವನ್ನು Man-Mega Watt ratio ಅನ್ವಯ ಪರಿಷ್ಕರಿಸಿ ಅಧಿಸೂಚಿಸಿ ಪಾಲಿಸಲಾಗುತ್ತಿದ್ದು, ಮೇಲ್ಕಾಣಿಸಿರುವ ವಿವರಗಳು ಸದರಿ ವೃಂದ ಬಲದನ್ವಯ ಇರುತ್ತವೆ. ಆದರೆ ಪ್ರಸ್ತುತ ನಿಗಮದ ಯರಮರಸ್ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಚಾಲನೆ ಮತ್ತು ನಿರ್ವಹಣೆಯ ಕಾರ್ಯವನ್ನು ಖಾಸಗಿ ಸಂಸ್ಥೆಗೆ ಹೊರಗುತ್ತಿಗೆ ನೀಡಲಾಗಿರುತ್ತದೆ ಮತ್ತು ಹೈಡಲ್ ಯೋಜನಾ ಪ್ರದೇಶದ ಸ್ಥಾವರಗಳನ್ನು ಯಾಂತ್ರೀಕರಣ (Automation) ಗೊಳಿಸಲಾಗಿರುವುದರಿಂದ ನಿಗಮದ ವೃಂದ ಬಲವನ್ನು ಪರಿಷ್ಕರಿಸಲು ವ್ಯವಸ್ಥಾಪಕ ನಿರ್ದೇಶಕರು ಉಪ ಸಮಿತಿಯೊಂದನ್ನು ರಚಿಸಿದ್ದು, ಉಪ ಸಮಿತಿಯು ಸಲ್ಲಿಸಿರುವ ವರದಿಯನುಸಾರ ಹೆಚ್‌ಎಲ್‌ಸಿ ಸಮಿತಿಯು ವೃಂದ ಬಲವನ್ನು ಪರಿಷ್ಕರಿಸಿ ನಿಗಮದ ನಿರ್ದೇಶಕರ ಮಂಡಳಿಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಿದೆ. ಸದರಿ ಸಮಿತಿಯು ನೀಡಿರುವ ವರದಿಯನುಸಾರ ಪರಿಷ್ಕರಣೆಗೊಂಡಿರುವ ವೃಂದ ಬಲದ ಅನ್ವಯ ಲಭ್ಯವಾಗಲಿರುವ ಖಾಲಿ ಹುದ್ದೆಗಳ ವಿವರ ಕೆಳಕಾಣಿಸಿರುವಂತಿದೆ.

| ಪರಿಷ್ಕೃತ ಮಂಜೂರಾದ ಒಟ್ಟು ಹುದ್ದೆಗಳ ಸಂಖ್ಯೆ | ಭರ್ತಿ ಮಾಡಿರುವ ಒಟ್ಟು ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆಗಳ ವಿವರ |
|---|---|---|
| 5408 | 3703 | 1705 |

(ಆ) ಸದರಿ ಸಂಸ್ಥೆಗಳಲ್ಲಿ ಐ.ಎ.ಎಸ್, ಐ.ಎಫ್.ಎಸ್, ಐ.ಆರ್.ಎಸ್. ಶ್ರೇಣಿಯ ಅಧಿಕಾರಿಗಳು ಸಹ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವುದು ನಿಜವೇ; ಹಾಗಿದ್ದಲ್ಲಿ, ನಿಯೋಜನೆ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಯಾರು; (ವರ್ಷವಾರು, ಶ್ರೇಣಿವಾರು, ಅವಧಿ ಕುರಿತಾಗಿ ಸಂಸ್ಥೆವಾರು ಪ್ರತ್ಯೇಕ ಮಾಹಿತಿ ಒದಗಿಸುವುದು;

ಕೆ.ಪಿ.ಟಿ.ಸಿ.ಎಲ್ ಹಾಗೂ ಬೆಸ್ಕಾಂ ಸಂಸ್ಥೆಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಐ.ಎ.ಎಸ್, ಹಾಗೂ ಐ.ಆರ್.ಎಸ್. ಶ್ರೇಣಿಯ ಅಧಿಕಾರಿಗಳ ವಿವರಗಳು ಕೆಳಕಂಡಂತಿವೆ:-

| ಕ್ರ. ಸಂ | ಅಧಿಕಾರಿಯ ಹೆಸರು | ಹುದ್ದೆ | ಶ್ರೇಣಿ | ವರ್ಷವಾರು |
|---|---|---|---|---|
| 1 | ಶ್ರೀ.ಪಂಕಜ್ ಕುಮಾರ್ ಪಾಂಡೆ | ವ್ಯವಸ್ಥಾಪಕ ನಿರ್ದೇಶಕರು, ಕೆ.ಪಿ.ಟಿ.ಸಿ.ಎಲ್ | ಐ.ಎ.ಎಸ್ | ಜೂನ್-2023 ರಿಂದ ಪ್ರಸ್ತುತ |
| 2 | ಶ್ರೀ ಮಹಾಂತೇಶ ಬೀಳಗಿ | ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ | ಐ.ಎ.ಎಸ್ | ಜುಲೈ-2022 ರಿಂದ ಪ್ರಸ್ತುತ |
| 3 | ಶ್ರೀ ದರ್ಶನ್ ಜೆ. | ನಿರ್ದೇಶಕರು (ಹಣಕಾಸು) ಬೆಸ್ಕಾಂ | ಐ.ಆರ್.ಎಸ್ | ನವೆಂಬರ್-2021 ರಿಂದ ಪ್ರಸ್ತುತ |

| | | |
|---|---|---|
| (ಇ) | ಈ ಸಂಸ್ಥೆಗಳಲ್ಲಿ ವಯೋ ನಿವೃತ್ತಿ ಹೊಂದಿದ ನಂತರ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ ನೌಕರರುಗಳಿಗೆ ಪಾವತಿಸುವ ವೇತನ ಎಷ್ಟು? (ಸಂಪೂರ್ಣ ಮಾಹಿತಿ ಪ್ರತ್ಯೇಕವಾಗಿ ಒದಗಿಸುವುದು) | ಕೆ.ಪಿ.ಟಿ.ಸಿ.ಎಲ್ ಹಾಗೂ ಬೆಸ್ಕಾಂ ಸಂಸ್ಥೆಗಳಲ್ಲಿ ಪ್ರಸ್ತುತ ನಿವೃತ್ತಿ ಹೊಂದಿದ ನಂತರ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ವಿವರಗಳು ಕೆಳಕಂಡಂತಿವೆ:- |

| ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆ | ಸಂಸ್ಥೆ | ಮಾಸಿಕ ವೇತನ (ರೂ. ಗಳಲ್ಲಿ) |
|---|---|---|
| ಕಾನೂನು ಸಲಹೆಗಾರರು | ಕೆ.ಪಿ.ಟಿ.ಸಿ.ಎಲ್ | 1,00,000/- |
| ಉಪ ಪ್ರಧಾನ ವ್ಯವಸ್ಥಾಪಕರು (ಕಾ) / ಸಮಾಲೋಚಕರು | ಕೆ.ಪಿ.ಟಿ.ಸಿ.ಎಲ್ | 75,000/- |
| ಹಿರಿಯ ಆಪ್ತ ಕಾರ್ಯದರ್ಶಿ | ಕೆ.ಪಿ.ಟಿ.ಸಿ.ಎಲ್ | 65,000/- |
| ಮಾನ್ಯ ಇಂಧನ ಸಚಿವರ ವಿಶೇಷಾಧಿಕಾರಿ | ಕೆ.ಪಿ.ಟಿ.ಸಿ.ಎಲ್ | 75,000/- |
| ಸಮಾಲೋಚಕರು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ರವರ ಆಪ್ತ ಶಾಖೆ | ಕೆ.ಪಿ.ಟಿ.ಸಿ.ಎಲ್ | 72,000/- |
| ಸಲಹೆಗಾರರು (ವಿದ್ಯುತ್ ಖರೀದಿ ಶಾಖೆ) | ಬೆಸ್ಕಾಂ | 65,000/- |
| ಸಮಾಲೋಚಕರು (ಇಂಧನ ಇಲಾಖೆ) | ಬೆಸ್ಕಾಂ | 65,000/- |
| ತಾಂತ್ರಿಕ ಸಲಹೆಗಾರರು (ಡಿಎಸ್‌ಎಂ ಶಾಖೆ) | ಬೆಸ್ಕಾಂ | 60,000/- |
| ಸಲಹೆಗಾರರು ಐಪಿಡಿಎಸ್ ತಂತ್ರಾಂಶ (ಐಸಿಟಿ & ಎಂಐಎಸ್ ಶಾಖೆ) | ಬೆಸ್ಕಾಂ | 65,000/- |
| ಮಾನ್ಯ ಇಂಧನ ಸಚಿವರ ಆಪ್ತ ಸಹಾಯಕ | ಬೆಸ್ಕಾಂ | 55,000/- |

ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಲ್ಲಿ ವಯೋನಿವೃತ್ತಿ ಹೊಂದಿ, ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ವೇತನ ವಿವರಗಳು ಈ ಕೆಳಕಂಡಂತಿರುತ್ತದೆ.

| ಪ್ರಸ್ತುತ ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆ | ನಿವೃತ್ತಿ ಹೊಂದಿರುವ ಸಂಸ್ಥೆ | ನಿಗಮದಲ್ಲಿ ಪಾವತಿಸುತ್ತಿರುವ ಮಾಸಿಕ ವೇತನ (ರೂ.ಗಳಲ್ಲಿ) |
|---|---|---|
| **ಮುಖ್ಯಸ್ಥರು (ಪರಿಸರ & ಅರಣ್ಯ)** | **ಅರಣ್ಯ ಇಲಾಖೆ** | **2,07,293/-** |
| **ಹಣಕಾಸು ನಿರ್ದೇಶಕರು** | **ಕೆಪಿಸಿಎಲ್** | **97,060/-** |
| **ಮುಖ್ಯಸ್ಥರು (ಭೂ-ಸ್ವಾಧೀನ, ಪುನರ್ವಸತಿ ಮತ್ತು ಪರಿಹಾರ)** | **ಕಂದಾಯ ಇಲಾಖೆ** | **53,000/-** |

ಸಂಖ್ಯೆ: ಎನರ್ಜಿ 311 ಇಬಿಎಸ್ 2023

(ಕೆ.ಜೆ.ಜಾರ್ಜ್) 8/12/23
ಇಂಧನ ಸಚಿವರು

**<u>ವಿಧಾನ ಪರಿಷತ್ತು ಮಾನ್ಯ ಸದಸ್ಯರಾದ ಶ್ರೀ ಅರವಿಂದ ಕುಮಾರ್ ಅರಳಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:661ಕ್ಕೆ ಅನುಬಂಧ.</u>**

<u>ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆ.ಪಿ.ಟಿ.ಸಿ.ಎಲ್) ಹಾಗೂ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳ ವಿವರಗಳು ಕೆಳಕಂಡಂತಿವೆ:-</u>

| ಶ್ರೇಣಿ | ಕೆ.ಪಿ.ಟಿ.ಸಿ.ಎಲ್ (ಮಾರ್ಚ್-2023 ರ ಅಂತ್ಯಕ್ಕೆ) | | | ಬೆಸ್ಕಾಂ (ಮಾರ್ಚ್-2023 ರ ಅಂತ್ಯಕ್ಕೆ) | | |
|---|---|---|---|---|---|---|
| | ಮಂಜೂರಾದ ಹುದ್ದೆ | ಕಾರ್ಯ ನಿರ್ವಹಿಸುತ್ತಿರುವ ಹುದ್ದೆ | ಖಾಲಿ ಹುದ್ದೆ | ಮಂಜೂರಾದ ಹುದ್ದೆ | ಕಾರ್ಯ ನಿರ್ವಹಿಸುತ್ತಿರುವ ಹುದ್ದೆ | ಖಾಲಿ ಹುದ್ದೆ |
| ಎ | 1,322 | 1,110 | 212 | 661 | 561 | 100 |
| ಬಿ | 1,524 | 1,266 | 258 | 1,086 | 744 | 342 |
| ಸಿ | 6,150 | 4,260 | 1,890 | 9,750 | 6,202 | 3,548 |
| ಡಿ | 7,333 | 2,856 | 4,477 | 13,141 | 6,890 | 6,251 |
| ಒಟ್ಟು | **16,329** | **9,492** | **6,837** | **24,638** | **14,397** | **10,241** |